


International Journal of Kannada Research
www.kannadajournal.com

**ISSN: 2454–5813**
IJKR 2022; 8(1): 88-91
© 2022 IJKR
www.kannadajournal.com
Received: 10-11-2021
Accepted: 13-12-2021

**ಎಂ.ಎನ್. ಜಯಶೀಲ**
ಮುಖ್ಯಸ್ಥರು, ಕನ್ನಡ ವಿಭಾಗ,
ಜೆ.ಎಸ್.ಎಸ್. ಕಲಾ, ವಾಣಿಜ್ಯ
ಕಾಲೇಜು, ಗುಂಡ್ಲುಪೇಟೆ.

**Corresponding Author:**
**ಎಂ.ಎನ್. ಜಯಶೀಲ**
ಮುಖ್ಯಸ್ಥರು, ಕನ್ನಡ ವಿಭಾಗ,
ಜೆ.ಎಸ್.ಎಸ್. ಕಲಾ, ವಾಣಿಜ್ಯ
ಕಾಲೇಜು, ಗುಂಡ್ಲುಪೇಟೆ.

# ಮೈಸೂರು ನಗರದ ಬಂಬೂ ಬಜಾರಿನ ಮೇದರ ಒಳಾಡಳಿತ ವ್ಯವಸ್ಥೆ (ನ್ಯಾಯ ತೀರ್ಮಾನ)

**ಎಂ.ಎನ್. ಜಯಶೀಲ**

ಮೇದರ ಒಳಾಡಳಿತ ವ್ಯವಸ್ಥೆ ಪ್ರದೇಶಾನುಸಾರವಾಗಿ ರೂಪುಗೊಂಡಿರುತ್ತದೆ. ಈ ರೀತಿ ಆಡಳಿತ ವ್ಯವಸ್ಥೆಗೆ ಜಾತಿಯಲ್ಲಿ ಹಿರಿಯನಾದವರನ್ನು ಆಯ್ಕೆ ಮಾಡುತ್ತಾರೆ. ಜಾತಿಯ ಮುಖಂಡರೆಲ್ಲ ಸೇರಿ ಯಜಮಾನನನ್ನು ಆಯ್ಕೆ ಮಾಡಿದರೆ ಅದೇ ಸಭೆಯಲ್ಲಿ ಯಜಮಾನ ತನಗೆ ಸಹಾಯಕರಾಗುವ ತಿಳುವಳಿಕೆಯುಳ್ಳ ಹಿರಿಯರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಕನ್ನಡಿಗ ಮೇದರಲ್ಲಿ ಪಟೇಲ, ಹಿರಿಯ ಯಜಮಾನ ಎಂಬ ಹೆಸರಿನಿಂದ ಕರೆಯುತ್ತಾರೆ. ಯಜಮಾನ ಅಥವಾ ಗೌಡರಿಗೆ ಪೇಟ ಕಟ್ಟಿ ಹಾರ ಹಾಕಿ ಹಿರಿತನದ ಸ್ಥಾನವನ್ನು ಬಿಟ್ಟುಕೊಡುತ್ತಾರೆ. ಕುಲಸ್ತರಲ್ಲಿ ಆಗುವ ಕೆಲವು ತಪ್ಪುಗಳಿಗೆ ನ್ಯಾಯ ಮಾಡಿ ಸರಿಪಡಿಸಿಕೊಳ್ಳಲು ನ್ಯಾಯ ಸೇರಿಸುತ್ತಾರೆ. ಚುನಾಯಿಸಿಕೊಂಡ ಗೌಡರು ಹಾಗೂ ಯಜಮಾನರ ನೇತೃತ್ವದಲ್ಲಿಯೇ ಎಲ್ಲಾ ರೀತಿಯ ಮದುವೆ, ಮುಂಜಿ, ಶುಭ, ಅಶುಭ, ಕಾರ್ಯಗಳು ನಡೆಯುವುದು.
ವಿವಾಹದ ಸಂದರ್ಭದಲ್ಲಿ ಜಾತಿಯ ಒಳಜಗಳಗಳಲ್ಲಿ ಬೇರೆ ಜಾತಿಯ ಸಂಬಂಧಗಳಾದಲ್ಲಿ, ಸಾವಿನ ಸಂದರ್ಭಗಳಲ್ಲಿ ಜಾತಿಯ ಆಡಳಿತ ನಡೆಸುವವರು ಪಂಚಾಯಿತಿ ನಡೆಸಿ ತಾವೇ ನ್ಯಾಯ ತೀರ್ಮಾನ ಮಾಡುತ್ತಾರೆ. ಜಗಳ, ಹಾದರ, ಕಳ್ಳತನ, ದರೋಡೆಗಳಾದರೂ ಜಾತಿಯವರು ವಿಧಿಸುವ ಶಿಕ್ಷೆಯನ್ನು ಒಪ್ಪಿಕೊಳ್ಳಲೇಬೇಕು.
ಗೌಡರು–ಯಜಮಾನರು ನ್ಯಾಯ ನಡೆಸಬೇಕಾದರೆ ಕುಲಸ್ತರನ್ನು ಒಂದು ಸ್ಥಳಕ್ಕೆ ಬಂದು ಸೇರಲು ಕುಲಸ್ತರಲ್ಲಿ ಇಬ್ಬರನ್ನು ಎಲ್ಲರ ಮನೆಗಳಿಗೆ ಕಳುಹಿಸುತ್ತಾರೆ. ಇದಕ್ಕೆ "ಜೋಡಾ" ಎಂದು ಹೇಳುತ್ತಾರೆ. ಕುಲಸ್ತರೆಲ್ಲಾ ಬಂದು ಸೇರಿದ ನಂತರ ಸ್ಥಳ ಭರ್ತಿಯಾಗಿದೆಯಾ? ಎಂದು ನೋಡುತ್ತಾರೆ. ಅಂದರೆ ನ್ಯಾಯಕ್ಕೆ ಆ ಸ್ಥಳದ ಅಥವಾ ಊರಿನ ಎಲ್ಲಾ ಕುಲಸ್ತರು, ಮನೆಗೆ ಒಬ್ಬ ಯಜಮಾನರಾದವರು ಬಂದು ಸೇರಿದ್ದಾರೆಯೇ ಎಂದು ನಂತರ ಏಕೆ ಸೇರಲಾಯ್ತು ಎಂಬುದನ್ನು ತಿಳಿಸಿ ಎಲ್ಲರಿಂದಲೂ ಆ ವಿಷಯದ ಬಗ್ಗೆ ಅಭಿಪ್ರಾಯಗಳನ್ನು ಕೇಳುತ್ತಾರೆ. ನಂತರ ಎಲ್ಲರ ಅಭಿಪ್ರಾಯದಂತೆ ತೀರ್ಪನ್ನು ಪ್ರಕಟಿಸುತ್ತಾರೆ. ತಪ್ಪಿನ ಮಹತ್ವದ ಮೇಲೆ ದಂಡ ವಿಧಿಸುತ್ತಾರೆ. ಎರಡು ಎಲೆ–ಅಡಿಕೆಯಿಂದ ಹಿಡಿದು ಸಾವಿರಾರು ರೂಪಾಯಿಗಳು ಮತ್ತು ಕುಲಕ್ಕೆ ಒಂದು ಊಟ ಕೊಡುವವರಿಗೆ ಇರುತ್ತದೆ. ತಪ್ಪಿತಸ್ತರೇನಾದರೂ ಕುಲಕ್ಕೆ ವಿರುದ್ಧವಾಗಿ ನಡೆದರೆ ಹಿಂದಿನ ಕಾಲದಲ್ಲಿ ಒಂಟಿ ಕಾಲಿನಲ್ಲಿ ನಿಲ್ಲಿಸುವುದು, ಕಂಬಕ್ಕೆ ಕಟ್ಟುವುದು, ಬಹಿಷ್ಕಾರ ಹಾಕುವುದು ಆಚಾರದಲ್ಲಿತ್ತು.
ಕುಲ ಕುತ್ತಿಗೆ ಎತ್ತರ, ಕುಲದ ಹೆಣ್ಣು ಕೋತಿಯಂತಿದ್ದರು, ಕುಲದ ಹೆಣ್ಣನ್ನು ಮದುವೆಯಾಗಬೇಕು ಎನ್ನುವ ನಾಣ್ಣುಡಿ ಇತ್ತು. ಹಿಂದೆ ಸುಮಾರು ಊರು, ಹಳ್ಳಿಗಳು ಸೇರಿ ಒಂದು ಗಡಿಮನೆ ಎಂದು ಒಂದು ಊರನ್ನು ಆರಿಸಿ ಇಡುತ್ತಿದ್ದರು. ಅದಕ್ಕೆ ಗಡಿನಾಡು ಎಂದು ಹೆಸರಿತ್ತು. ಅಂದರೆ ಮೇಲೆ ಹೇಳಿದಂತೆ ಇದರ ವ್ಯಾಪ್ತಿಗೆ ಸುಮಾರು 20–24 ಊರು ಹಳ್ಳಿ ಸೇರುತ್ತಿತ್ತು. ಆಯಾ ಊರಿನಲ್ಲೆ ಪರಿಹರಿಸಿಕೊಳ್ಳಬಹುದಾದ ನ್ಯಾಯ ಅಲ್ಲೇ ತೀರ್ಮಾನಿಸುತ್ತಿದ್ದರು. ಕಠಿಣವಾದ ಸಮಸ್ಯೆ ಹಾಗೂ ಇತರೆ ಊರಿಗೂ ಸಂಬಂಧಿಸಿದ್ದಾದರೆ ಆ ನ್ಯಾಯ ಕಟ್ಟೆ ಮನೆಯಲ್ಲಿ ಪರಿಹರಿಸಿಕೊಳ್ಳಬೇಕಾಗುತ್ತಿತ್ತು. ಆ ತರಹದ ನ್ಯಾಯ ಮಾಡಬೇಕಾದರೆ ಗಡಿಮನೆ ವ್ಯಾಪ್ತಿಗೆ ಬರುವ ಊರಿನ ಎಲ್ಲಾ ಗೌಡರು, ಯಜಮಾನರು ಹಾಗೂ ಕುಲಸ್ತರು ಮತ್ತು ಗಡಿಮನೆ ಯಜಮಾನರು, ಗೌಡರು. ಆ ಊರಿನ ಸಮಸ್ತ ಕುಲಬಾಂಧವರನ್ನು ಸೇರಿಸಿ ನ್ಯಾಯ ಮಾಡಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಅಲ್ಲಿ ತೆಗೆದುಕೊಳ್ಳುವ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಬೇಕಾಗುತ್ತಿತ್ತು. ಒಂದು ವೇಳೆ ತಪ್ಪಿತಸ್ಥರೇನಾದರೂ ನ್ಯಾಯಕ್ಕೆ ಬರದೇ ಇದ್ದರೆ "ಬೀಳು ನಾಯಿ"ಯನ್ನು ಕಳುಹಿಸಿ ಕರೆತರುವ ಪದ್ಧತಿ ಇತ್ತು.

(ಜೋಡಾ–ಬೀಳುನಾಯಿ ಇಬ್ಬರು ಕುಲಸ್ತರನ್ನು ಕಳುಹಿಸಿ ಕರೆತರಿಸುತ್ತಾರೆ).

ಮದುವೆಯ ಸಂದರ್ಭದಲ್ಲಿ ನಿಶ್ಚಯವಾದೊಡನೆ ಈ ಸುದ್ದಿಯನ್ನು ಜಾತಿಯವರ ಸಭೆ ಕರೆದು ಎಲ್ಲರಿಗೂ ಹೇಳುವವನು ಯಜಮಾನ ಅಥವಾ ಗೌಡರು. ಮೊದಲು ಜಾತಿಯ ಹಿರಿಯನಾದ ಗೌಡನಿಗೆ ವೀಳಯದ ಮರ್ಯಾದೆ ಮಾಡಿದ ನಂತರ ಉಳಿದವರಿಗೆ ಮರ್ಯಾದೆ ನೀಡುತ್ತಾರೆ. ನಿಶ್ಚಯ ತಾಂಬೂಲವನ್ನು ಗಂಡಿನ ಹಾಗೂ ಹೆಣ್ಣಿನ ಕಡೆಯವರಿಗೆ ಬದಲಾಯಿಸಿಕೊಳ್ಳುವಲ್ಲಿ ಈತನೇ ಮಧ್ಯವರ್ತಿ, ನಂತರ ಯಜಮಾನ ಹಾಗೂ ಗೌಡರೇ ದಿಬ್ಬಣ ಹೊರಡಲು ತಿಳಿಸುತ್ತಾರೆ. ಯಜಮಾನರ ಆಜ್ಞೆಯನ್ನು ಮೀರಿ ಮೊದಲೇ ಹೊರಡುವುದಾಗಲಿ, ಮದುವೆ ನಿಶ್ಚಯವಾಗಲಿ ಸಾಧ್ಯವಿಲ್ಲ.

ಹೆಣ್ಣು ಮನೆಗೆ ಹಾಗೂ ಗಂಡಿನ ಮನೆಯ ಉಡುಗೊರೆ ತಟ್ಟೆ ಹಾಗೂ ಹಣ್ಣು ಹಂಪಲುಗಳನ್ನು ತಲುಪಿಸುವವನೂ ಯಜಮಾನನೇ, ಮನೆಯ ಮುಂದೆ ಚಪ್ಪರ ಹಾಕಲು ಯಜಮಾನನೇ ಅಪ್ಪಣೆ ಕೊಡುತ್ತಾರೆ. ವಿವಾಹವಾಗುವ ದಂಪತಿಗಳಿಗೆ ಧಾರೆ ಎರೆಯುವವನೂ ಮೊದಲು ಜಾತಿಯ ಯಜಮಾನರೇ, ಮುಯ್ಯಿ ಕೊಟ್ಟವರ ಹೆಸರನ್ನು ಬರೆಯುವವರು ಗೌಡರೇ, ಕೊನೆಯಲ್ಲಿ ಗೌಡ ಅಥವಾ ಯಜಮಾನರಿಗೆ ಗೌರವ ತಾಂಬೂಲವನ್ನು ನೀಡುತ್ತಾರೆ. ಒಮ್ಮೆ ಮದುವೆ ನಿಶ್ಚಯವಾದರೆ ನಂತರ ಅದನ್ನು ಬದಲಾಯಿಸಲು ಗೌಡರು ಬಿಡುವುದಿಲ್ಲ. ಇವರಲ್ಲಿ ಕೂಡಿಕೆ ಪದ್ಧತಿಯಿದೆ. ಹೆಂಡತಿ ತೀರಿ ಹೋದವನು ಅಥವಾ ಗಂಡ ತೀರಿ ಹೋದವಳು ವಿವಾಹವಾಗಲು ಇವರಲ್ಲಿ ಅವಕಾಶವಿದೆ. ಗಂಡ–ಹೆಂಡತಿಯರಾಗುವವರ ಒಪ್ಪಿಗೆಯ ಮೇರೆಗೆ ಗೌಡರು ಕೂಡಿಕೆ ಮಾಡಿಸುತ್ತಾರೆ. ಅನಂತರ ಅವರಿಗೆ ಹುಟ್ಟಿದ ಮಕ್ಕಳನ್ನು ಜಾತಿಯವರು ಯಾರು ಬೇಕಾದರೂ ವಿವಾಹವಾಗಬಹುದು. ಆದರೆ ವಿಧವೆಯಾದವಳು ವಿವಾಹವಾದರೂ ಅವಳಿಗೆ ಶುಭ ಕಾರ್ಯದಲ್ಲಿ ಇತರ ಹೆಣ್ಣುಗಳಂತೆ ಅವಕಾಶವಿಲ್ಲ. ಈ ರೀತಿ ಕೂಡಿಕೆ ಮಾಡಿಕೊಳ್ಳುವವರಿಗೆ ಸಮಾಜದ ಮುಖಂಡರೂ ಪಂಚಾಯಿತಿ ವತಿಯಿಂದ ಸೀರೆ ಹಾಗೂ ಪಂಚೆಯನ್ನು ಕೊಡುತ್ತಾರೆ. ತಾಳಿಯನ್ನು ಕೊಡುತ್ತಾರೆ. ಇದಕ್ಕೆ ನಿಗದಿಪಡಿಸಿದ ಹಣವನ್ನು ಕಟ್ಟಬೇಕು. ಸಂಪ್ರದಾಯದ ರೀತಿಯ ವಿವಾಹದ ಆಚರಣೆಗಳು ಕೂಡಿಕೆಯಲ್ಲಿ ಇರುವುದಿಲ್ಲ. ಹೆಂಡತಿಯನ್ನು ಬಿಟ್ಟವರು ಕೂಡ ವಿಧವೆಯರನ್ನು ಮದುವೆ ಮಾಡಿಕೊಳ್ಳಲು ಗೌಡರು ಅವಕಾಶ ಕಲ್ಪಿಸುತ್ತಾರೆ. ಬಂದವರಿಗೆಲ್ಲ ವೀಳ್ಯ ಕೊಟ್ಟು ಗೌರವಿಸುತ್ತಾರೆ. ಮದುವೆ ಮಾಡಿಕೊಂಡವನು ಜಾತಿಯವರಿಗೆಲ್ಲಾ ಊಟ ಹಾಕುತ್ತಾನೆ.

ಬೇರೆ ಜಾತಿಯವಳನ್ನು ಮದುವೆಯಾದರೆ ಅವನನ್ನು ಮನೆಗೆ ಸೇರಿಸುವುದಿಲ್ಲ. ಮೇದರ ಹುಡುಗಿ ಬೇರೆ ಜಾತಿಯವನನ್ನು ಮದುವೆಯಾದರೂ ಅವಳನ್ನು ಮತ್ತೆ ಕೇರಿಗೆ ಸೇರಿಸುವುದಿಲ್ಲ. ಅವಳಿಗೆ ಅಥವಾ ಜಾತಿಯ ಗಂಡಿಗೆ ಅನ್ಯ ಜಾತಿಯಿಂದ ಹುಟ್ಟಿದ ಮಕ್ಕಳನ್ನು ಜಾತಿಯವರು ವಿವಾಹವಾಗುವಂತಿಲ್ಲ. ಜಾತಿಯ ಗೌಡ ಅಥವಾ ಯಜಮಾನರು ಹೇಳಿದ ಮಾತನ್ನು ಯಾರೂ ತಿರಸ್ಕರಿಸುವಂತಿಲ್ಲ. ಹಾಗೆ ತಿರಸ್ಕರಿಸಿದರೆ ಬಹಿಷ್ಕಾರವನ್ನು ಹಾಕುತ್ತಾರೆ. ಇಂಥ ಬಹಿಷ್ಕಾರಕ್ಕೆ ಜಾತಿಯವರೆಲ್ಲರೂ ಒಪ್ಪಿಗೆ ಕೊಡುತ್ತಾರೆ. ತಮ್ಮ ಜಾತಿಯಲ್ಲಿ ಹುಡುಗಿಯರು ಇರುವಾಗ ಮೇಲ್ಜಾತಿಯ ಹುಡುಗಿಯನ್ನು ಮದುವೆಯಾದರೂ ಸಮಾಜದವರು ಬಹಿಷ್ಕಾರ ಹಾಕುತ್ತಾರೆ.

ಗಂಡು ನಪುಂಸಕನಾಗಿದ್ದರೆ, ಹೆಂಡತಿ ಬೇರೆಯವರ ಜೊತೆ ದೈಹಿಕ ಸಂಬಂಧ ಇಟ್ಟುಕೊಂಡಿದ್ದರೆ ಪಂಚಾಯಿತಿಯಲ್ಲಿ ಈ ವಿಚಾರವನ್ನು ಹೇಳಬೇಕು ಆಗ ಸಂಬಂಧ ಇಟ್ಟುಕೊಂಡ ಹೆಣ್ಣು ಗೌಡನ ಮಾತಿನಂತೆ ತಾಳಿಯನ್ನು ಬಿಚ್ಚಿಕೊಡುತ್ತಾಳೆ ಮತ್ತು ಮದುವೆ ಕಾಲದಲ್ಲಿ ಕೊಟ್ಟಿದ್ದ ತೆರವನ್ನು ಹಿಂದಿರುಗಿಸಬೇಕಾಗುತ್ತದೆ.

ವಿಧವೆಯನ್ನು ಮದುವೆಯಾದ ವ್ಯಕ್ತಿಯು ಅವಳು ಹಿಂದಿನ ಗಂಡನಿಂದ ಪಡೆದ ಮಕ್ಕಳನ್ನು ಸಾಕಬೇಕೆಂದು ಪಂಚಾಯಿತಿ ತೀರ್ಮಾನಿಸುತ್ತದೆ. ಇದಕ್ಕೆ ಆತನು ಬದ್ಧನಾಗಿರುತ್ತಾನೆ. ಮದುವೆಯಾಗುವುದಕ್ಕಿಂತ ಮೊದಲೇ ಹುಡುಗಿ ಬಸುರಿಯಾದರೆ ಪಂಚಾಯಿತಿಯಲ್ಲಿ ಬಸುರಿಗೆ ಕಾರಣನಾದವನಿಗೇ ಕಟ್ಟಲಾಗುವುದು. ಹಾಗೆ ಕಟ್ಟಬೇಕಾದರೆ ಆ ಹುಡುಗ ತಮ್ಮ ಕುಲಸ್ಥನಾಗಿರಬೇಕಾಗುತ್ತದೆ. ಅನ್ಯ ಜಾತಿಯವನಾದರೆ ಅವಳನ್ನು ಜಾತಿಯಿಂದ ಬಹಿಷ್ಕರಿಸುತ್ತಾರೆ. ಈ ರೀತಿಯ ಮದುವೆಯು ತುರ್ತಾಗಿ ನಡೆಯುವುದರಿಂದ ಸಂಪ್ರದಾಯದ ವಿಧಿಗಳಲ್ಲಿ, ಜಾತಿ ಮುಖಂಡರೇ ಸೇರಿ'ಒಳಗುಧಾರೆ' ನಡೆಸುತ್ತಾರೆ. ವ್ಯಭಿಚಾರ, ಕುಲಭ್ರಷ್ಟತೆ ದಂಪತಿಗಳ ಭಿನ್ನಾಭಿಪ್ರಾಯವಿದ್ದಾಗ ವಿವಾಹ ವಿಚ್ಛೇದನಕ್ಕೂ ಅವಕಾಶ ಮಾಡುತ್ತಾರೆ. ಜಾತಿಯವರು ಜಾತಿಯವರೊಡನೆ ಜಗಳವಾಡಿದರೆ ಅದನ್ನು ಪಂಚಾಯಿತಿಗೆ ತಂದರೆ ರಾಜಿ ಒಪ್ಪಂದ ಮಾಡಿಸುತ್ತಾರೆ. ತಪ್ಪು ಮಾಡಿದ್ದವರಿಗೆ ದಂಡ ವಿಧಿಸುತ್ತಾರೆ. ಅನ್ಯ ಜಾತಿಯವರಲ್ಲಿ ಜಗಳವಾಡಿದರೂ ಅದನ್ನು ಸಮಜಾಯಿಷಿ ಮಾಡಿ ತಿಳುವಳಿಕೆ ಹೇಳಿ ತಪ್ಪಿತಸ್ಥನಿಂದ ದಂಡ ವಸೂಲು ಮಾಡುತ್ತಾರೆ. ಬೇರೆ ಜಾತಿಯ ಮುಖಂಡರಲ್ಲಿ ಜಗಳ ಮಾಡಿದವನನ್ನು ಒಪ್ಪಿಸಿ ರಾಜಿ ಮಾಡಿಸುವುದು ಇವರ ವಿಶಿಷ್ಟ ರೀತಿ. ಕಳ್ಳತನ ಮಾಡಿದರೆ ಜಾತಿ ಬಹಿಷ್ಕಾರ ಹಾಕುತ್ತಾರೆ. ಅವನನ್ನು ಜಾತಿಯ ಯಾರೂ ಸೇರಿಸುವುದಿಲ್ಲ ಹಾಗೂ ಗೌರವವನ್ನು ಕೊಡುವುದಿಲ್ಲ. ಕೊಲೆ, ಸುಲಿಗೆ, ದರೋಡೆಗಳಿಗೆ ಭಾಗಿಯಾದವನನ್ನು ಜಾತಿಯಿಂದ ಹೊರಹಾಕುತ್ತಾರೆ. ಆದರೆ ಈವರೆವಿಗೂ ತಮ್ಮಲ್ಲಿ ಕೊಲೆ ದರೋಡೆಗಳಲ್ಲಿ ಭಾಗಿಯಾದ ಸಂದರ್ಭಗಳೇ ಇಲ್ಲವೆನ್ನುತ್ತಾರೆ. ಆದರೆ ವಿವಾಹದ ಸಂದರ್ಭದಲ್ಲಿ ಹಿರಿಯರನ್ನು ತಾತ್ಸಾರ ಮಾಡಿ ದಂಡ ಕೊಟ್ಟ ಸಂದರ್ಭಗಳಿವೆ ಎನ್ನುತ್ತಾರೆ.

ಸಾಮಾನ್ಯವಾಗಿ ಜಾತಿಯ ಅಂತಃಕಲಹದ ಕಾರಣದಿಂದ ಮೇದರಲ್ಲಿ ಕೋರ್ಟಿಗೆ ಹೋಗಿರುವ ಪ್ರಸಂಗಗಳು ಈವರೆವಿಗೂ ಆಗಿಲ್ಲವೆಂದು ಹೆಮ್ಮೆಯಿಂದ ಹೇಳುತ್ತಾರೆ. ಜಾತಿಯ ಮುಖಂಡರು ಸಭೆ ಸೇರಿಸಿ ಹಾಕಿದ ದಂಡವನ್ನು ಕೊಡುತ್ತಾರಲ್ಲದೆ ಅದಕ್ಕೆ ವಿರುದ್ಧವಾಗಿ ಮಾತನಾಡುವುದಿಲ್ಲ. ಆರ್ಥಿಕ ಅಭದ್ರತೆಯಲ್ಲಿರುವ ಮೇದರು ಸಂಘಟನೆ ವಿರುದ್ಧ ಕೋರ್ಟಿಗೆ ಹೋಗುವ ಸಾಧ್ಯತೆಗಳೂ ಇಲ್ಲ. ತೀರ ಬಡವನಾದ ತಮ್ಮ ಪಂಗಡದವನಿಗೆ ಸಮಾಜದಿಂದ ಹಣದ ಸಹಕಾರ ನೀಡುತ್ತಾರೆ. ಮದುವೆ, ಆರ್ಥಿಕ ನಷ್ಟ, ಕಾಯಿಲೆ, ಕಸಾಲೆಗಳಾದಾಗ ಗೌಡ, ಯಜಮಾನರು ಸಾಕಷ್ಟು ಸಹಕಾರ ನೀಡಿದ ಪ್ರಸಂಗಗಳಿವೆ.

ಮೇದರಲ್ಲಿ ಸಾವು ಉಂಟಾದಾಗ ಯಜಮಾನರು, ಗೌಡರು ಜಾತಿಯವರಿಗೆಲ್ಲಾ ಸುದ್ದಿ ಮುಟ್ಟಿಸುತ್ತಾರೆ. ಜಾತಿಯಲ್ಲಿ ಮನೆಗೊಬ್ಬರಂತೆ ಬರಲೇಬೇಕು. ಇಲ್ಲದಲ್ಲಿ ದಂಡವನ್ನು ವಿಧಿಸುತ್ತಾರೆ. ಸತ್ತವರ ಮನೆಯವರನ್ನು ಸಮಾಧಾನಪಡಿಸುವುದು ಜಾತಿ ಮುಖಂಡರ ಕೆಲಸ.

ಇದಲ್ಲದೆ ಧಾರ್ಮಿಕ ಹಬ್ಬಗಳ ಆಚರಣೆ, ಜಾತ್ರೆಗಳಿಗೆ ಪರು ಹೋಗುವುದು ದೇವರ ಕಾರ್ಯಗಳನ್ನು ಸಾಮೂಹಿಕವಾಗಿ ನೆರವೇರಿಸುವುದು. ವಾರ್ಷಿಕ ಹಬ್ಬಗಳು, ವಿಶೇಷ ಹಬ್ಬಗಳು ಮೊದಲಾದ ಸಂದರ್ಭಗಳಲ್ಲಿ ಜಾತಿಯ ಯಜಮಾನರು ಚರ್ಚೆ ಮಾಡಿ ನಿರ್ಣಯಿಸುವ ಸಂದರ್ಭಗಳಿರುತ್ತವೆ. ತಮ್ಮ ಬಿದಿರು ವಸ್ತುಗಳಿಗೆ ನ್ಯಾಯವಾದ ಬೆಲೆ ಸಿಗಲು ಸರ್ಕಾರದೊಡನೆ ವ್ಯವಹರಿಸುವುದು, ಪರಿಶಿಷ್ಟ ಬುಡಕಟ್ಟಿಗೆ ಸಿಗುವ ಸೌಲಭ್ಯಗಳಿಗೆ ಪ್ರಯತ್ನ, ವಿದ್ಯಾಭ್ಯಾಸಕ್ಕೆ ಬುಡಕಟ್ಟು ತರುಣರಿಗೆ ಸಹಾಯ ಇವೆಲ್ಲವನ್ನು ಸಂಘದ ಮೂಲಕ ನಡೆಸುತ್ತಾರೆ. ಕೆಲವು ಬಾರಿ ತಮ್ಮ

ಕೇರಿಯ ಪಂಚಾಯಿತಿಯಿಂದ ನ್ಯಾಯ ತೀರ್ಮಾನ ಸಾಧ್ಯವಾಗದಿದ್ದರೆ ಜಿಲ್ಲಾ ಮಟ್ಟದ ಮುಂದಾಳುಗಳಿಗೆ ಒಪ್ಪಿಸುತ್ತಾರೆ.

ಬಹಿಷ್ಕಾರವು ಹಿಂದೆ ಶಿಕ್ಷೆಯೆ ಆಗಿತ್ತು. ಬಹಿಷ್ಕೃತನಾದವನು 'ಮೇದ' ಸಮಾಜದಲ್ಲಿ ತಿರಸ್ಕಾರಕ್ಕೆ ಒಳಗಾಗಿ ತಮ್ಮ ಪಂಗಡದಲ್ಲಿ ನಡೆಯುವ ಶುಭ ಅಶುಭಗಳಲ್ಲಿ ಪಾಲ್ಗೊಳ್ಳಲು ಬಿಡುವುದಿಲ್ಲ. ಅಲ್ಲದೆ ಆತ ಬೊಂಬು, ಬಿದಿರನ್ನಂತು ಕಡಿಯುವಂತಿಲ್ಲ. ಆತನಿಗೆ ಸಹಭೋಜನ ಮಾಡಲು ಅವಕಾಶವೂ ಇಲ್ಲ. ಅನ್ಯ ಜಾತಿಯವರ ಜೊತೆ ಸಹಭೋಜನ ಮಾಡಿದರೆ ಅನ್ಯರೊಡನೆ ಸೇರಿ ಜಾತಿಯವರಿಗೆ ತೊಂದರೆ ಮಾಡಿದರೆ ಬಹಿಷ್ಕಾರ ಮುಂದುವರೆಯುತ್ತದೆ. ಬಹಿಷ್ಕೃತ ಜಾತಿಯ ಹಿರಿಯರೊಡನೆ ಗಲಾಟೆ ಮಾಡಿದರೆ ಜಾತಿಯವರು ಬೇರೆ ರೀತಿಯ ಶಿಕ್ಷೆಯನ್ನು ವಿಧಿಸುತ್ತಾರೆ.

ವಿವಾಹವಾದ ಹೆಣ್ಣಿಗೆ ಗಂಡನು ಅನ್ಯ ಸಂಬಂಧವಿಟ್ಟುಕೊಂಡು ಕಿರುಕುಳ ಕೊಡುವುದನ್ನು ಸಮಾಜ ಸಹಿಸುವುದಿಲ್ಲ. ಹಾಗೆ ಕಿರುಕುಳ ಕೊಟ್ಟ ಬಗ್ಗೆ ಹೆಂಡತಿ ಹಿರಿಯರಿಗೆ ಹೇಳಿದರೆ ಇದನ್ನು ಪಂಚಾಯಿತಿಗೆ ತಾರದೆ ಮನೆಗೆ ಹೋಗಿ ಬಗೆಹರಿಸುತ್ತಾರೆ. ಕಿರುಕುಳದ ಕಾರಣಗಳನ್ನು ಗಂಡನು ಹೇಳಬೇಕಾಗುತ್ತದೆ. ಇತರ ಹೆಣ್ಣಿನೊಡನೆ ಇಟ್ಟುಕೊಳ್ಳುವ ಅನೈತಿಕ ಸಂಬಂಧವಾದರೆ ಅಂತ ವ್ಯಾಜ್ಯಗಳನ್ನು ಪಂಚಾಯಿತಿಯಲ್ಲಿಯೇ ಬಗೆಹರಿಸುತ್ತಾರೆ. ಮೇದರು ವಯೋವೃದ್ಧ ತಂದೆ ತಾಯಿಗಳ ರಕ್ಷಣೆಯನ್ನು ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಿದರೆ ಪಂಚಾಯಿತಿಯವರು ತಿಳಿ ಹೇಳುತ್ತಾರೆ. ಕೇಳದಿದ್ದಲ್ಲಿ ಪಂಚಾಯಿತಿಯಲ್ಲೇ ತಂದೆ–ತಾಯಿಗಳಿಗೆ ತಿಂಗಳು ಇಷ್ಟು ಹಣವೆಂದು ಜೀವನಕ್ಕೆ ಕೊಡಬೇಕಾಗುತ್ತದೆ. ಹೀಗೆ ಮೇದರ ಸಂಘಟನೆ ಮತ್ತು ಆಡಳಿತ ಈವರೆವಿಗೂ ನಿರಾತಂಕವಾಗಿ ಸಾಗುತ್ತಿದೆ ಎಂಬ ಸಮಾಧಾನವನ್ನು ಹಿರಿಯರು ತೋರಿದ್ದಾರೆ.

**ಪಂಚಮಗನ ಪದ್ಧತಿ**

ನ್ಯಾಯಾಡಳಿತ ವ್ಯವಸ್ಥೆಯ ಒಂದು ಪದ್ಧತಿ ಈ ಪಂಗಡದ ಕುಲಸ್ತರುಗಳು ಇರುವ ಕಡೆ ಇವರು ಕಸುಬಿಗಾಗಿ ಆಯುಧಗಳನ್ನಾಗಲಿ ಬೊಂಬುಗಳನ್ನಾಗಲಿ ಕುಲಸ್ತರಲ್ಲಿ ಯಾರು ಕದಿಯುವಂತಿಲ್ಲ. ಬೇಕಾದರೆ ಕೇಳಿ ಪಡೆದು ವಾಪಸ್ ನೀಡಬಹುದಾಗಿತ್ತು. ಅದು ಬಿಟ್ಟು ಯಾರಾದರೂ ಅದನ್ನು ಕದ್ದು ಸಿಕ್ಕಿಹಾಕಿಕೊಂಡು ಬಿಟ್ಟರೆ ಅವನನ್ನು ಹಿಡಿದು ಕುಲಸ್ತರನ್ನೆಲ್ಲಾ ಒಟ್ಟಿಗೆ ಸೇರಿಸಿ ಅಲ್ಲದೆ ಅವರ ವಿಭಾಗಕ್ಕೆ ಸೇರಿದ ಗಡಿ ಯಜಮಾನ, ಗೌಡರುಗಳನ್ನು ಸಹ ಕರೆಸಿ ನ್ಯಾಯ ಮಾಡುವುದು. ಅವನು ಕದ್ದದ್ದು ಸಾಬೀತು ಪಟ್ಟದ್ದದಾದರೆ ಅವನಿಗೆ ಶಿಕ್ಷೆ ವಿಧಿಸುತ್ತಾರೆ. ಅಂದರೆ ಎಲ್ಲಿ ಘಟನೆ ನಡೆಯುತ್ತದೋ ಅಲ್ಲಿನ ಸಮಸ್ತ ಕುಲಸ್ತರೂ ಹಾಗೂ ಯಜಮಾನ, ಗೌಡರು ಹಾಗೂ ಹೊರ ಊರಿನ ಅಂದರೆ ಆ ಊರಿಗೆ ಸೇರಿದ ಗಡಿಯ ಕುಲಸ್ತರು, ಗೌಡರು, ಯಜಮಾನರುಗಳು ಸೇರಿ ಅವನಿಗೆ "ಪಂಚಮಗ" ಎಂದು ತೀರ್ಪು ನೀಡುತ್ತಾರೆ. "ಪಂಚಮಗ" ಎಂದರೆ ಜನಾಂಗದ ಎಲ್ಲಾ ಕುಲಸ್ತರ ಮಗನೆಂದು ಪರಿಗಣಿಸಲಾಗುತ್ತದೆ. ತೀರ್ಪು ನೀಡಿದ ನಂತರ ಅವನು ಕದ್ದ ಕತ್ತಿಯನ್ನು ಕಾಯಿಸಿ ಬೆನ್ನಿನ ಮೇಲೆ ಬರೆ ಹಾಕುತ್ತಾರೆ. ಆ ತರಹದ ಶಿಕ್ಷೆ ವಿಧಿಸಿದ ನಂತರ ಅವನು, ಅವನ ಕುಟುಂಬದವರು ಅಂದರೆ ಹೆಂಡತಿ, ಮಕ್ಕಳು ಬಿದಿರಿನ ಕೆಲಸ ಮಾಡುವಂತಿಲ್ಲ. ಅಲ್ಲದೇ ಅವನು ಬೇರೆ ಯಾವ ಕೆಲಸವನ್ನು ಮಾಡುವಂತಿಲ್ಲ. ಅಂದರೆ ಅವನ ಮುಂದಿನ ಜೀವನದ ನಿರ್ವಹಣೆಯ ಜವಾಬ್ದಾರಿಯನ್ನು ಕುಲಸ್ತರೇ ನಿರ್ವಹಿಸಬೇಕಾಗುತ್ತದೆ.

ಅವರು ಒಂದೊಂದು ದಿನ ಒಬ್ಬೊಬ್ಬ ಕುಲಸ್ತರ ಮನೆಯಲ್ಲಿ ಊಟ ಮಾಡಬೇಕಾಗುತ್ತದೆ. ಅವರು ಯಾರ ಮನೆಗೆ ಹೋಗಬೇಕೆನಿಸುತ್ತದೋ ಆ ಮನೆಗೆ ಹಿಂದಿನ ರಾತ್ರಿಯೇ ಹೋಗಿ ಎಲೆ ಅಡಿಕೆಯನ್ನು ಆ ಮನೆಯ ಯಜಮಾನನಿಗೆ ನೀಡಿ, ಅವರಿಗೆ ಯಾವ ಊಟ ಬೇಕೋ ಅದನ್ನು ಸಹ ತಿಳಿಸಿ, ಬರುವ ವಿಷಯವನ್ನು ತಿಳಿಸಿರುತ್ತಾರೆ. ಅಂತೆಯೇ ಅವರು ಬೆಳಿಗ್ಗೆ ಒಟ್ಟಿಗೆ ಬರುತ್ತಾರೆ. ಅವರು ತಿಳಿಸಿದಂತೆಯೇ ಭೋಜನವನ್ನು ಎಷ್ಟೇ ಖರ್ಚಾಗಲಿ ಆ ಮನೆಯವರು ಅವರಿಗೆ ಹೊಟ್ಟೆ ತುಂಬುವಷ್ಟು ಬಡಿಸಿ ಉಪಚರಿಸಬೇಕು. ಅವರನ್ನು ತಮ್ಮ ಮನೆಯ ಮಗನಂತೆಯೇ ನೋಡಿಕೊಳ್ಳಬೇಕಾಗುತ್ತದೆ. ಒಂದು ದಿನ ಪೂರ್ಣ ಇದ್ದು ಅವರು ಹೋಗುವಾಗ ಖರ್ಚಿಗೆ ಕೈಲಾದಷ್ಟು ಹಣ–ಬಟ್ಟೆ ಕೊಡಬೇಕಾಗುತ್ತದೆ. ಹಾಗೆ ಅವರು ಆ ಊರಿನಲ್ಲಿರುವ ಕುಲಸ್ತರ ಮನೆ–ಮನೆಗಳಿಗೆ ಹೋಗಿ ಜೀವನ ಸಾಗಿಸುತ್ತಾರೆ. ನಂತರ ಬೇರೆ ಊರುಗಳಿಗೂ ಸಹ ಹೋಗುತ್ತಾರೆ. ಹೀಗೆ ಅವರ ತಲೆಮಾರು ನಡೆದುಕೊಳ್ಳುತ್ತಾರೆ.

**ಮೈಸೂರು ನಗರದ ಬಂಬೂ ಬಜಾರಿನಲ್ಲಿರುವ ಮೇದರ ಜನಪದ ನಂಬಿಕೆಗಳು**

ಸಾಮಾನ್ಯವಾಗಿ ಸಮಾಜದಲ್ಲಿ ರೂಢಿಯಲ್ಲಿರುವ ನಂಬಿಕೆಗಳು ಇವರಲ್ಲಿದ್ದರೂ ಈ ಮೇಧರು ಧಾರ್ಮಿಕ, ದೇವರ ಪೂಜೆ ಮತ್ತು ವೃತ್ತಿ ಹಾಗೂ ಜೀವನ ಚಕ್ರದ ಹಿನ್ನೆಲೆಯಲ್ಲಿ ಅನುಸರಿಸುವ ನಂಬಿಕೆಗಳನ್ನಷ್ಟೇ ಇಲ್ಲಿ ಸೂಚಿಸಲಾಗುತ್ತಿದೆ.

**ಹುಟ್ಟಿಗೆ ಸಂಬಂಧಿಸಿದಂತೆ**

1. ನಾವು ಮಹೇಂದ್ರಾಚಲ ಪರ್ವತದಿಂದ ಬಂದವರು ಹಾಗಾಗಿ ಮೇದರೆನ್ನುತ್ತಾರೆ.
2. ಶಿವನ ಆಭರಣವಾದ ಹಾವುಗಳೇ ಬಿದಿರುಗಳಾಗಿವೆ.
3. ತಾವು ಪಾರ್ವತಿಗಾಗಿ ಬಿದಿರು ಕಡಿದು ಮೊರ ಮಾಡುವ ಶಿವಭಕ್ತರು ಹಾಗಾಗಿ ಶಕ್ತಿ ಆರಾಧನೆಯನ್ನು ಮಾಡುತ್ತಾರೆ.
4. ಶಿವಗಣಗಳು ಹಾಗೂ ಗಂಧರ್ವ ಸ್ತ್ರೀಯರು ಇವರ ಹುಟ್ಟಿನ ಮೂಲ ಪುರುಷರು.
5. ಗೌರಿಶಂಕರರ ಆಜ್ಞೆಯಂತೆ ಹುಟ್ಟಿದವರು.

**ದೇವರು**

1. ಮಾರಮ್ಮ, ಪ್ಲೇಗು, ಕಾಲರಾ ದೇವತೆ ಇವಳ ಆರಾಧನೆಯಿಂದ ಈ ರೋಗಗಳು ತಟ್ಟುವುದಿಲ್ಲ.
2. ಆದಿ ಪರಾಶಕ್ತಿ ಹಾಗೂ ಯಲ್ಲಮ್ಮನಿಗೆ ಮುಡಿ ಕೊಡುವುದರಿಂದ ಮಕ್ಕಳ ಆರೋಗ್ಯ ಹೆಚ್ಚಾಗುತ್ತದೆ.
3. ಶಕ್ತಿ ಆರಾಧನೆಯಿಂದ ಮಾಟ ಮಂತ್ರಗಳು ಪರಿಣಾಮ ಬೀರುವುದಿಲ್ಲ.
4. ಗುಳ್ಳಮ್ಮ, ಯಲ್ಲಮ್ಮ, ಕೊಲ್ಲಾರಮ್ಮ ದೇವರನ್ನು ಪೂಜಿಸಿದರೆ ಕಾಡಿನಲ್ಲಿ ದುಷ್ಟ ಪ್ರಾಣಿಗಳ ಉಪದ್ರವವಿರುವುದಿಲ್ಲ.
5. ಬಲಿ ಕೊಡುವಾಗ ಊರು ದೇವರಿಗೆ ಹಾಗೆ ಕಾಡು ದೇವರಿಗೆ ಎಂದು ಎರಡು ಬಲಿ ಕೊಡಬೇಕು. ಇಲ್ಲದಿದ್ದರೆ ದೇವತೆ ಸಂತೃಪ್ತಳಾಗುವುದಿಲ್ಲ.
6. ಬಿದಿರು ಕಡಿಯುವಾಗ ಗಾಯವಾದರೆ ದೇವರ ಹೆಸರು ಹೇಳಿ ಬಿದಿರಿನ ಹಸಿರು ಬಜ್ಜಿ ಹಚ್ಚಿದರೆ ಗಾಯ ಮಾಯುತ್ತದೆ.
7. ತಿರುಪತಿ ಒಕ್ಕಲಿನವರು ದಾಸಯ್ಯನಿಗೆ ಎಡೆ ಇಟ್ಟರೆ ಸ್ವರ್ಗ ಪ್ರಾಪ್ತಿಯಾಗುತ್ತದೆ.
8. ಮಲಿಯಮ್ಮನ ಹಬ್ಬದ ದಿನ ವೃತ್ತಿಗೆ ಸಂಬಂಧಿಸಿದ ಹತ್ತಾರುಗಳನ್ನಿಟ್ಟು ಪೂಜೆ ನಡೆಸಬೇಕು.
9. ಎಳಬಿ ಹಬ್ಬದ ದಿನ ಮಲಿಯಮ್ಮನ ಹೆಸರಿನಲ್ಲಿ ಹರಕೆ ಕಟ್ಟುತ್ತಾರೆ.
10. ಕೊಂಗಳ್ಳಿ ಮಲ್ಲಿಕಾರ್ಜುನ ದೇವಾಲಯಕ್ಕೆ ಹೆಂಗಸರು

ಹೋಗಬಾರದು.
11. ಹೆಂಗಸರ ಸೀರೆ ಬಟ್ಟೆಯಲ್ಲಿ ಹಣವನ್ನು ಮುಡಿಪು ಕಟ್ಟಬಾರದು. ಹಾಗೆ ಕಟ್ಟಿದರೆ ಹಾವು ಮೇಲೆ ಹರಿಯುತ್ತದೆ.
12. ಮನೆ ಒಳಗೆ ಗುಂಡಿ ತೆಗೆದು ಬೆಂಕಿ ಉರಿಸಿದರೆ ಅಮ್ಮನು ತೊಂದರೆ ಕೊಡುವುದಿಲ್ಲ.
13. ಮೇದರ ಬಲಭಾಗದಿಂದ ಪ್ರಸಾದ ಬಿದ್ದರೆ ಶುಭ ಬಲಭಾಗದಿಂದ ಪ್ರಸಾದ ತೆಗೆದು ಬೆಸ ಬಂದರೆ ಶುಭ.
14. ಪ್ರತಿದಿನ ಮಲಗುವಾಗ ಮನೆ ದೇವರನ್ನು ಧ್ಯಾನಿಸಿ ಮಲಗಿದರೆ ದುಃಸ್ವಪ್ನ ಬೀಳುವುದಿಲ್ಲ.
15. ಗುಡಿಸಲು ಹೊರಗೆ ಗುಂಡಿ ಮಾಡಿ ಬೆಂಕಿ ಉರಿಸಿದರೆ ಅದನ್ನು ದೇವರ ಗುಂಡಿ ಎಂದು ಭೂತ ಪ್ರೇತಗಳು ಓಡುತ್ತವೆ.

**ವೃತ್ತಿಗೆ ಸಂಬಂಧಿಸಿದಂತೆ**

1. ಎಳಬೆ ಬೊಂಬು ಕಡಿದರೆ ಸಂತಾನಕ್ಕೆ ಧಕ್ಕೆಯಾಗುತ್ತದೆ.
2. ಬಿದಿರು ಕಡಿಯುವ ಹತಾರಗಳನ್ನು ಪೂಜೆ ಮಾಡಿಯೇ ಬಿದಿರು ಕಡಿಯಬೇಕು.
3. ಬಿದಿರು ಮಳೆಯಲ್ಲಿ ಹಾವು ಸೇರುವುದಿಲ್ಲ. ಕಾರಣ ಸರ್ಪಗಳೇ ಬಿದಿರಾದ್ದರಿಂದ ತಮ್ಮವರಿಗೆ ತೊಂದರೆ ಮಾಡುವುದಿಲ್ಲ.
4. ಮೊದಲ ಸಾರಿ ಗಳು ಬಿದಿರು ಕಡಿಯುವಾಗ ದೇವತೆಯ ಹೆಸರಿನಲ್ಲಿ ಬಲಿಕೊಟ್ಟು ನಂತರ ಕಡಿಯಬೇಕು.
5. ಅಮಾವಾಸ್ಯೆ ದಿನ ಬಿದಿರು ಕೆಲಸಗಳನ್ನು ಮಾಡಕೂಡದು.
6. ಬಿದಿರು, ಬೊಂಬಿನ ಮನೆ ಮೇದಾರರಿಗೆ ಶ್ರೇಯಸ್ಸು ತರುತ್ತದೆ.
7. ಕಾಡು ದೇವತೆಗಳಿಗೆ ನಮಸ್ಕಾರ ಸಲ್ಲಿಸಿ ಬಿದಿರು ಕಡಿದರೆ ಪ್ರಾಣಿಗಳಿದ್ದರೂ ಕಣ್ಣಿಗೆ ಕಾಣುವುದಿಲ್ಲ.
8. ನವೆಂಬರ್‌ನಲ್ಲಿ ಹೊಸ ಗಳುವಿನ ಮೇಲೆ ಕತ್ತಿ ಇಟ್ಟು ಪೂಜಿಸಿ ನಂತರ ಗಳುವನ್ನು ಕಡಿದರೆ ಜೀವಕ್ಕೆ ಅಪಾಯವಿರುವುದಿಲ್ಲ.

**ಕೌಟುಂಬಿಕ ನಂಬಿಕೆಗಳು**

1. ಮಗುವನ್ನು ಮೇದರು ಬಿದಿರಿನ ತೊಟ್ಟಿಲಿಗೆ ಹಾಕುವುದಿಲ್ಲ. ಹಾಕಿದರೆ ಸಂತತಿ ಹಾಳಾಗುತ್ತದೆ ಮತ್ತು ಮಗುವಿನ ಆರೋಗ್ಯಕ್ಕೆ ಒಳ್ಳೆಯದಲ್ಲ.
2. ಮಂಡೆಯನ್ನು ಸ್ತ್ರೀ ಪುರುಷರಾದಿಯಾಗಿ ದೇವರಿಗೆ ಅರ್ಪಿಸಬೇಕು. ಇದರಿಂದ ಜೀವನದಲ್ಲಿ ಒಂದು ವರ್ಷ ದೇವರ ರಕ್ಷಣೆಯಿರುತ್ತದೆ.
3. ಮೈನೆರೆದ ಹೆಣ್ಣು ಮಗು 9 ದಿನ ಮೈಲಿಗೆ ಗುಡಿಸಲಿನಲ್ಲಿ ಕಳೆಯಬೇಕು. ಇಲ್ಲದಲ್ಲಿ ಭೂತಗಳ ಉಪದ್ರವವಾಗುತ್ತದೆ.
4. ಮನೆಯ ಸೂತಕ ಹೋಗಲು ದೇವರ ತೀರ್ಥ ಹಾಕಬೇಕು. ಪುಣ್ಯಾಹ ಮಾಡಿಸಬೇಕು.
5. ಮಂಗಳವಾರ, ಶುಕ್ರವಾರ ಮೈನೆರೆಯಬಾರದು. ಕುಜ ದೋಷವಿದ್ದರೆ ಯಾರೂ ಮದುವೆಯಾಗುವುದಿಲ್ಲ.
6. ಅರಿಶಿನದ ಬಟ್ಟೆ ಧರಿಸಿದರೆ ಮೈಗೆ ನಂಜು ತಾಗುವುದಿಲ್ಲ.
7. ಮದುವೆಯನ್ನು ಅಮಾವಾಸ್ಯೆ, ಮಂಗಳವಾರ, ಶನಿವಾರ, ಹುಣ್ಣಿಮೆಯಂದು ಮಾಡಿಕೊಳ್ಳಬಾರದು.
8. ಹುಡುಗಿಗೆ ದೈಹಿಕ ದೋಷಗಳಿರಬಾರದು.
9. ಹೀನಸುಳಿ, ಮೆಳ್ಳಗಣ್ಣು, ಮಾಲಕಣ್ಣು, ಕೂಸಕಣ್ಣು, ಉಗ್ಗು ಮುಂತಾದವು ಇದ್ದರೆ ಮದುವೆಯಾಗಬಾರದು.
10. ಕೆಟ್ಟ ದಿನ ಸತ್ತರೆ ಮನೆ ಬಿಡಬೇಕು. ಮನೆಯ ಒಳಗೆ ಸತ್ತರೆ ಅಶುಭ ಕೆಲವು ದಿನವಾದರೂ ಮನೆ ಬಿಡಬೇಕಾಗುತ್ತದೆ.
11. ಸತ್ತವರಿಗೆ ಸರಿಯಾಗಿ ಕ್ರಿಯೆ ಮಾಡದಿದ್ದರೆ ಅವರ ಆತ್ಮ ಅಳುತ್ತಿರುತ್ತದೆ. ಅಂಥ ಕಾಲದಲ್ಲಿ ಕುಟುಂಬಕ್ಕೆ ಒಳ್ಳೆಯದಾಗುವುದಿಲ್ಲ.
12. ತೊನ್ನು, ಕುಷ್ಟ ರೋಗದವರು ಬಾಣಂತಿಯರು ಸತ್ತರೆ ಸುಟ್ಟು ಹಾಕಬೇಕು.
13. ಮಕ್ಕಳಿಲ್ಲದವರು ಮಗುವಿನ ಕರುಳಬಳ್ಳಿ ತಿಂದರೆ ಮಕ್ಕಳಾಗುತ್ತದೆ.
14. ಮನೆ ಕಟ್ಟುವಾಗ ಮತ್ತು ಗೃಹಪ್ರವೇಶದ ದಿನ ಕುರಿ, ಕೋಳಿ ಬಲಿ ಕೊಡಬೇಕು. ಇದರಿಂದ ಮನೆಗೆ ಶುಭವಾಗುತ್ತದೆ.
15. ಬಸುರಿ ಸಂಜೆ ಹೊತ್ತು ಹೊರ ಹೋದರೆ ದೆವ್ವ, ಪೀಡೆಗಳ ಕಾಟ ತಪ್ಪಿದ್ದಲ್ಲ.
16. ಅಮಾವಾಸ್ಯೆ, ಗ್ರಹಣ, ಪೂರ್ಣಿಮೆ ದಿನ ಹಡೆಯಬಾರದು. ತಂದೆ ತಾಯಿಗಳಿಗೆ ಅಶುಭ-ಶಾಂತಿ ಮಾಡಿಸಬೇಕು.
17. ನಾಗದೋಷ, ಮೂಲ ನಕ್ಷತ್ರದಲ್ಲಿ ಹುಟ್ಟಿದ ಹೆಣ್ಣನ್ನು ಮದುವೆಯಾಗಬಾರದು.
18. ಮದುವೆಗೆ ಹಸಿರು ಬಿದುರನ್ನು ಕಟ್ಟಬೇಕು. 12 ಕಂಬಗಳನ್ನು ನೆಡಬೇಕು.
19. ಛತ್ರಿ, ಕನ್ನಡಿ, ಬಿದಿರು, ಬುಟ್ಟಿ, ಹಣ್ಣು, ಹೂವು, ದೀಪ ಎದುರಿಗೆ ಬಂದರೆ ಶುಭ.
20. ಹೆಣ, ವಿಧವೆ, ಖಾಲಿ ಕೊಡ ಅಶುಭ. ಇದರಿಂದ ಶುಭ ಕಾರ್ಯ ಹಾಳಾಗುತ್ತದೆ.
21. ಹಾವು, ಉಡ, ಓತ, ಅಡ್ಡ ಬರಬಾರದು.
22. ಶಿವರಾತ್ರಿ ದಿನ ಜಾಗರಣೆ ಮಾಡದಿದ್ದರೆ ಕತ್ತೆಯ ಜನ್ಮ ಬರುತ್ತದೆ.
23. ಮಕ್ಕಳ ನಾಮಕರಣದ ಕಾಲದಲ್ಲಿ ಬಾಗಿಲಿಗೆ ಹಳೆ ಮೆಟ್ಟುಗಳನ್ನು ಕಟ್ಟಿದರೆ ಗಾಳಿ (ಭೂತ) ಉಪದ್ರವವಿರುವುದಿಲ್ಲ.
24. ಮಗುವನ್ನು ದುರುಗುಟ್ಟಿ ನೋಡಿದರೆ, ಬಂಜೆ ಮುಟ್ಟಿದರೆ ದೃಷ್ಟಿ ತಾಗುತ್ತದೆ.